ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 1444
2. ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ
3. ಉತ್ತರಿಸಬೇಕಾದ ದಿನಾಂಕ: : 23-09-2021
3. ಉತ್ತರಿಸುವ ಸಚಿವರು : ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕುದೂರು ಹೋಬಳಿ, ಬಿಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಿಸ್ಕೂರು ಗ್ರಾಮದ ಬಿಸ್ಕೂರು ಕೆರೆ ಸುಮಾರು 153 ಎಕರೆ ವಿಸ್ತೀರ್ಣವಿದ್ದು, ಜಾಗವನ್ನು ಸುತ್ತಮುತ್ತಲಿನ ಗ್ರಾಮಸ್ಥರು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ತೆರವುಗೊಳಿಸಿ ಕೆರೆಯ ಜಾಗವನ್ನು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಕುದೂರು ಹೋಬಳಿ ಬಿಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಿಸ್ಕೂರು ಗ್ರಾಮದ ಬಿಸ್ಕೂರು ಕೆರೆ ಸುಮಾರು 153 ಎಕರೆ ವಿಸ್ತೀರ್ಣವಿದ್ದು, ಅದರಲ್ಲಿ 12 ಎಕರೆ ಪ್ರದೇಶದ ಒತ್ತುವರಿ ಯಾಗಿದ್ದು 2012 ರಲ್ಲಿ 12 ಎಕರೆ. ಪ್ರದೇಶದ ಒತ್ತುವರಿಯನ್ನು ತೆರವುಗೊಳಿಸಿ ಬೌಂಡ್ರಿಟ್ರೆಂಚ್ ಮಾಡಲಾಗಿದೆ.
ಇ	ಒತ್ತುವರಿ ಮಾಡಿರುವ ಗ್ರಾಮಸ್ಥರ ವಿರುದ್ಧ ತೆಗೆದುಕೊಂಡ ಕ್ರಮಗಳೇನು;	ಒತ್ತುವರಿ ತೆರವುಗೊಳಿಸುವ ಸಮಯದಲ್ಲಿ ರೈತರುಗಳು ಯಾವುದೇ ಅಡಚಣೆ ಮಾಡಿರುವುದಿಲ್ಲ. ಆದಕಾರಣ ಅವರುಗಳ ವಿರುದ್ಧ ಯಾವುದೇ ಕ್ರಮ ಜರುಗಿಸಿರುವುದಿಲ್ಲ.
ಈ	ಸದರಿ ಒತ್ತುವರಿಯನ್ನು ಸುಮಾರು 20 ವರ್ಷಗಳಿಂದಲೂ ತೆರವುಗೊಳಿಸದಿರಲು ಕಾರಣವೇನು?	ರಾಮನಗರ ಜಿಲ್ಲೆ, ಮಾಗಡಿ ತಾ: ಕುದೂರು ಹೋಬಳಿ ಬಿಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಿಸ್ಕೂರು ಗ್ರಾಮದ ಬಿಸ್ಕೂರು ಕರೆ ಸುಮಾರು 153 ಎಕರೆ ವಿಸ್ತೀರ್ಣವಿದ್ದು, ಅದರಲ್ಲಿ 12 ಎಕರೆ ಪ್ರದೇಶದ ಒತ್ತುವರಿಯಾಗಿದ್ದು 2012ರಲ್ಲಿ 12 ಎಕರೆ ಪ್ರದೇಶದ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ದಿ:21-6-2021 ರಂದು ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಕೆರೆಗಳ ಸಂರಕ್ಷಣೆ ಸಂಬಂಧ ಸಭೆಯಲ್ಲಿ ಒತ್ತುವರಿಯಾಗಿರುವ ಕೆರೆಗಳನ್ನು ಶೀಘ್ರವಾಗಿ ಪುನಃ ಸರ್ವೆ ಮಾಡಿ ಬೌಂಡ್ರಿ ನಿಗಧಿಪಡಿಸಲು ಕ್ರಮ ಕೈಗೊಳ್ಳಲು ಸರ್ವೆ ಇಲಾಖೆಗೆ ನಿರ್ದೇಶನ ನೀಡಿರುತ್ತಾರೆ.

ಸಂಖ್ಯೆ: **MID 122 LCQ 2021.**

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಮತ್ತು
ಸಣ್ಣ ನೀರಾವರಿ ಸಚಿವರು.